# ಕೃಷ್ಣಮೂರ್ತಿ ಕಣ್ಣ ಮುಂದೆ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
4. **Note:** The lyrics as per Ref. 1 are given separately without highlights and the wordings mentioned in yellow highlights are as per Ref.2. The wordings in Ref. 3 are almost similar to Ref. 2, but the Ankita is different.
5. **Note:** The singer has followed the lyrics in Ref. 1.

ರಾಗ ಕಾಂಬೋಧಿ ತಾಳ ಆದಿ

| | |
|---|---|
| ಕೃಷ್ಣಮೂರ್ತಿ ಕಣ್ಣ ಮುಂದೆ ನಿಂತಿದ್ದಂತಿದೆ ‖ ಪ ‖ | ಕೃಷ್ಣಮೂರ್ತಿ ಕಣ್ಣ ಮುಂದೆ ನಿಂತಿದ್ದಂತಿರೆ |
| ಕಷ್ಟಗಳೆಲ್ಲವ ಪರಿಹರಿಸಿ ಮನ- | |
| ದಿಷ್ಟಾರ್ಥಗಳನೆಲ್ಲ ಕೊಟ್ಟು ರಕ್ಷಿಸುವಂಥ ‖ ಅಪ ‖ | |
| ಮಸ್ತಕದಲಿ ಮಾಣಿಕದ ಕಿರೀಟ | ಮಸ್ತಕದಲಿ ಮಾಣಿಕದ ಕಿರೀಟ |
| ಕಸ್ತೂರಿ ತಿಲಕದಿ ಹೊಳೆವ ಲಲಾಟ | ಕಸ್ತೂರಿ ತಿಲಕವು ಹೊಳೆವ ಲಲಾಟ |
| ಶಿಸ್ತಿಲಿ ಕೊಳಲನೂದುವ ಒರೆ ನೋಟ | ಹಸ್ತದಿ ಕೊಳಲನೂದುವ ನೆರೆ ನೋಟ |
| ಕೌಸ್ತುಭ ಎಡ ಬಲದಲಿ ಓಲಾಟ ‖ ೧ ‖ | ಕೌಸ್ತುಭದೆಡಬಲದೊಳು ಲೋಲಾಟ |
| ಮಘ ಮಘಿಸುವ ಸೊಬಗಿನ ಸುಳಿಗುರುಳು | ಮಘ ಮಘಿಸುವ ಸೊಬಗಿನ ಸುಳಿಗುರುಳು |
| ಚಿಗುರು ತುಳಸಿ ವನಮಾಲೆಯ ಕೊರಳು | ಚಿಗುರು ತುಳಸಿ ವನಮಾಲೆಯಿಟ್ಟ ಕೊರಳು |
| ಬಗೆ ಬಗೆ ಹೊನ್ನುಂಗುರವಿಟ್ಟ ಬೆರಳು | ಉಗುರಿಗೆ ಹೊನ್ನ ಮುದ್ರಿಕೆಯಿಟ್ಟ ಬೆರಳು |
| ಸೊಬಗಿನ ನಾಭಿಯ ತಾವರೆಯರಳು ‖ ೨ ‖ | ಸೊಬಗಿನ ನಾಭಿಯು ತಾವರೆಯರಳು |
| ಉಡುದಾರ ವಡ್ಡ್ಯಾಣ ನಿಖಿಲಾಭರಣ | ಉಡುದಾರ ವಡ್ಡ್ಯಾಣ ಸಕಲಾಭರಣ |
| ಬೆಡಗು ಪೀತಾಂಬರ ರವಿಶತ ಕಿರಣ | ಬೆಡಗಿನ ಪೀತಾಂಬರ ರವಿ ಕಿರಣ |
| ಕಡಗ ನೂಪುರ ಗೆಜ್ಜೆಗಳನಿಟ್ಟ ಚರಣ | ಕಡಗ ಗಗ್ಗರ ಗೆಜ್ಜೆ ಇಕ್ಕಿದ ಚರಣ |
| ಒಡೆಯ ಶ್ರೀ ಪುರಂದರ ವಿಠಲನ ಕರುಣ ‖ ೩ ‖ | ಒಡೆಯ ಶ್ರೀ ಪುರಂದರ ವಿಠಲನ ಕರುಣ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಪದದಲ್ಲಿ ಉಡುಪಿಯ ಉಲ್ಲೇಖವಿಲ್ಲದಿದ್ದರೂ, ಬಂದಿರುವ ವರ್ಣನೆ ಅಲ್ಲಿಯ ಕೃಷ್ಣನದೇ ಎಂಬುದರಲ್ಲಿ ಸಂಶಯವಿಲ್ಲ. ಉತ್ಸವ ಸಂದರ್ಭದಲ್ಲಿ ಉಡುಪಿ ಕೃಷ್ಣನ ಮೂಲಮೂರ್ತಿಗೆ ವಿಶೇಷಾಲಂಕಾರಗಳನ್ನು ಮಾಡಿರುತ್ತಾರೆ; ಅದರ ವರ್ಣನೆಯೇ ಇದು.

**ಮಸ್ತಕ** – ತಲೆ

**ಲಲಾಟ** = ಹಣೆ

**ಕಡಗ** – ಕೈಬಳೆ.

**ಗಗ್ಗರ** = ಗೆಜ್ಜೆಗಳಿದ್ದ ಕಾಲಿನ ಆಭರಣ

**ಪೆಂಡೆ** – ಗೆಜ್ಜೆಗಳು.

**ಲೋಲಾಟ** = ಅಲುಗಾಟ

**ಮುದ್ರಿಕೆ** = ಉಂಗುರ

**ಒಡ್ಯಾಣ** = ನಡುಪಟ್ಟಿ

**Classification:** Keerthane
**Ankita:** sri purandara vittala
**Location:** Udupi, Karnataka State
**Category:** krishna stuti, bhakti, navaratna mAlike,
**Sub-Category:** Krishna, kannu, kolalu, tulasi, ungura, bangara, padma, abharana, Kasturi, gejje, karuna,
**Pravachana:** NA
**Explanation:** NA